**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 854/2018**
**ಚಾಸಾ :- 01 / ಪ್ರಾಸಾ :- 01**

| | |
|---|---|
| ಹೆಸರು | **ಪ್ರಕಾಶ್** |
| ತಂದೆಯ ಹೆಸರು | **ಮುನಿವೆಂಕಟಪ್ಪ** |
| ವಯಸ್ಸು | **58** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಹಾಗಲಹಳ್ಳಿ** |

**ದಿನಾಂಕಃ 15-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿ.24-06-2018 ರಂದು ನನ್ನ ಅಕ್ಕಳಾದ ಸಾವಿತ್ರಮ್ಮನವರ ಗಂಡ ಮೃತಪಟ್ಟಿರುತ್ತಾರೆ. ಅವರ ಅಂತಿಮ ಕ್ರಿಯೆಯನ್ನು ಮುಗಿಸಿಕೊಂಡು ಚಾಸಾ-2 ಮತ್ತು ಮೃತ ಅಂಬಿಕಾರವರು ವಾಪಸ್ಸು ಮೋಟಾರ್ ಬೈಕ್ ನಂ. ಕೆಎ-50-ಹೆಚ್-3332 ರಲ್ಲಿ ಮಂಚನಬೆಲೆಯಿಂದ ಬೆಂಗಳೂರು ಕಡೆಗೆ ಹೋಗುವಾಗ , ವಾಡಹಳ್ಳಿ ಗೇಟ್ ಹತ್ತಿರ ಕಾರ ನಂ. ಕೆಎ-09-ಪಿ-8092 ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ಚಾಸಾ-2 ರವರ ಬೈಕ್ ಗೆ ಅಪಘಾತ ಮಾಡಿರುತ್ತಾರೆ. ಸದರಿ ಅಪಘಾತದಿಂದ ಚಾಸಾ-2 ಮತ್ತು ಅಂಬಿಕರವರು ರಸ್ತೆಗೆ ಬಿದ್ದಿರುತ್ತಾರೆ. ಮೃತ ಅಂಬಿಕಾಳ ತಲೆಗೆ ತೀವ್ರವಾಗಿ ಪೆಟ್ಟಾಗಿ ರಕ್ತಸ್ರಾವ ವಾಗಿರುತ್ತದೆ. ಚಾಸಾ-2 ರವರ ತಲೆಗೆ, ಮುಖಕ್ಕೆ, ಕೈ ಕಾಲುಗಳಿಗೆ ಗಾಯವಾಗಿ ರಕ್ತಸ್ರಾವ ಆಗಿರುತ್ತದೆ.

ಚಾಸಾ-2 ರವರು ಮೋಟಾರ್ ಬೈಕ್ ನಲ್ಲಿ ಮುಂದೆ ಹೋಗುತ್ತಿದ್ದಾಗ, ನಾನು ಮತ್ತು ಚಾಸಾ-3 ರವರು ಮೋಟರ್ ಬೈಕ್ ನಲ್ಲಿ ಹಿಂದೆ ಹೋಗುತ್ತಿದ್ದೇವು. ಚಾಸಾ-2 ಮತ್ತು ಮೃತ ಅಂಬಿಕಾಳನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ಕರೆದುಕೊಂಡು

ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿರುತ್ತೇವೆ. ಹೆಚ್ಚಿನ ಚಿಕಿತ್ಸೆಗಾಗಿ ಇಬ್ಬರನ್ನು ಜಯನಗರದ ಅಪೋಲೋ ಆಸ್ಪತ್ರೆಗೆ ಸೇರಿಸಲಾಗಿತ್ತು. ದಿ.07-07-2018 ರಂದು ಚಿಕಿತ್ಸೆ ಫಲಕಾರಿಯಾಗದೇ ಅಂಬಿಕರವರು ಮೃತಪಟ್ಟಿರುತ್ತಾರೆ. ಚಾಸಾ-2 ರವರನ್ನು ಚಿಕಿತ್ಸೆ ಪಡೆದುಕೊಂಡು ನಂತರ ಮನೆಗೆ ಕಳುಹಿಸಲಾಯಿತು.

ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ತಾವರೆಕೆರೆ ಪೋ. ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ನಾನು ನೀಡಿದ ದೂರಾಗಿದೆ. ಅದರಲ್ಲಿ ನನ್ನ ಸಹಿ ಇದೆ. ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಅಪಘಾತಕ್ಕೆ ಕಾರಿನ ಚಾಲಕನೇ ಕಾರಣ. ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿರುವುದಿಲ್ಲ ಮತ್ತು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವಲ್ಲಿ ಯಾವುದೇ ತಕರಾರನ್ನು ವ್ಯಕ್ತಪಡಿಸಿರುವುದಿಲ್ಲ.

ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಪಂಚನಾಮೆ ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿ.25-06-2018 ರಂದು ಬೆಳಗ್ಗೆ 9 ರಿಂದ 10 ಗಂಟೆ ಸಮಯದಲ್ಲಿ ನಾನು ಅಪಘಾತ ನಡೆದ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆ ಮಾಡುವಾಗ ಸಹಿ ಮಾಡಿರುತ್ತೇನೆ. ನನ್ನ ಜೊತೆ ನಿಪಿ-2 ಕ್ಕೆ ಚಾಸಾ-3 ರಿಂದ 5 ರವರು ಸಹಿ ಮಾಡಿರುತ್ತಾರೆ. ಈಗ ನನಗೆ ಎರಡು ಫೋಟೋಗಳನ್ನು ತೋರಿಸಿದ್ದು, ಪೋಟೋದಲ್ಲಿ ಇರುವ ವಾಹನವೇ ಚಾಸಾ2 ಮತ್ತು ಮೃತ ಅಂಬಿಕರವರು ಹೋಗುತ್ತಿದ್ದ ಮೋಟಾರ್ ಬೈಕ್ ಗೆ ಡಿಕ್ಕಿಪಡಿಸಿರುತ್ತದೆ.

**ಪಾಟೀ ಸವಾಲು :- ಆರೋಪಿ ಪರ ಶ್ರೀ. ವಿ. ಕೆ ಪರವಾಗಿ ಶ್ರೀ ಜಿ.ಎನ್. ಎಸ್**

ವಕೀಲರಿಂದ :-

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ . ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ ಕಾರಣ ಮತ್ತು ನ್ಯಾಯಾಲಯವು ಅವಕಾಶ ನೀಡಿದ ಕಾರಣ ಮತ್ತೆ ಸಮಯ ನೀಡಲು ತಿರಸ್ಕರಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 854/2018**
**ಚಾಸಾ :- 02 / ಪ್ರಾಸಾ :- 02**

| | |
|---|---|
| ಹೆಸರು | **ಕುಮಾರ್** |
| ತಂದೆಯ ಹೆಸರು | **ಕೆಂಚಯ್ಯ** |
| ವಯಸ್ಸು | **47** |
| ಉದ್ಯೋಗ | **ಮುಖ್ಯ ಪೇದೆ** |
| ವಿಳಾಸ | **ಯಲಹಂಕ** |

**ದಿನಾಂಕಃ 15-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿ.24-06-2018 ರಂದು ನನ್ನ ಹೆಂಡತಿಯಾದ ಮೃತ ಅಂಬಿಕರವರ ಚಿಕ್ಕಪ್ಪನವರು ಮೃತಪಟ್ಟಿರುತ್ತಾರೆ. ಅವರ ಅಂತಿಮ ಕ್ರಿಯೆಯನ್ನು ಮುಗಿಸಿಕೊಂಡು ಸಂಜೆ 5.30 ರ ಸಮಯದಲ್ಲಿ ನಾನು ಮತ್ತು ಮೃತ ಅಂಬಿಕಾರವರು ವಾಪಸ್ಸು ಮೋಟಾರ್ ಬೈಕ್ ನಂ. ಕೆಎ-50-ಹೆಚ್-3332 ರಲ್ಲಿ ಮಂಚನಬೆಲೆಯಿಂದ ಬೆಂಗಳೂರು ಕಡೆಗೆ ಹೋಗುವಾಗ, ನಾನು ದ್ವಿಚಕ್ರವಾಹನವನ್ನು ಚಾಲನೆ ಮಾಡುತ್ತಿದ್ದೆ ಮತ್ತು ಮೃತ ಅಂಬಿಕಾರವರು ನನ್ನ ಹಿಂಬದಿಯಲ್ಲಿ ಕುಳಿತುಕೊಂಡಿರುತ್ತಾರೆ, ಆಗ ನನ್ನ ಎದುರುಗಡೆ ಚಿಕ್ಕನಹಳ್ಳಿ ಕಡೆಯಿಂದ ಮಂಚನಬೆಲೆ ಕಡೆಗೆ ಬರುತ್ತಿದ್ದ ಕಾರ ನಂ. ಕೆಎ-09-ಪಿ-8092 ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ನನ್ನ ಬೈಕ್ ಗೆ ಅಪಘಾತ ಮಾಡಿರುತ್ತಾರೆ. ಸದರಿ ಅಪಘಾತದಿಂದ ನಾನು ಮತ್ತು ಅಂಬಿಕಾರವರು ರಸ್ತೆಗೆ ಬಿದ್ದಿರುತ್ತಾವೆ. ಮೃತ ಅಂಬಿಕಾಳ ತಲೆಗೆ ತೀವ್ರವಾಗಿ ಪೆಟ್ಟಾಗಿ ರಕ್ತಸ್ರಾವ ವಾಗಿರುತ್ತದೆ. ಚಾಸಾ-2 ರವರ ತಲೆಗೆ, ಮುಖಕ್ಕೆ, ಕೈ ಕಾಲುಗಳಿಗೆ ಗಾಯವಾಗಿ ರಕ್ತಸ್ರಾವ ಆಗಿರುತ್ತದೆ.

ನನ್ನನ್ನು ಮತ್ತು ಮೃತ ಅಂಬಿಕಾಳನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿರುತ್ತಾರೆ. ಹೆಚ್ಚಿನ ಚಿಕಿತ್ಸೆಗಾಗಿ ನಮ್ಮನ್ನು ಜಯನಗರದ ಅಪೋಲೋ ಆಸ್ಪತ್ರೆಗೆ ಸೇರಿಸಲಾಗಿತ್ತು. ನಾನು ಎರಡು ಮೂರು ದಿನಗಳ ನಂತರ ಚಿಕಿತ್ಸೆ ಪಡೆದು ಮನೆಗೆ ಬಂದಿರುತ್ತೇನೆ. ದಿ.07-07-2018 ರಂದು ಚಿಕಿತ್ಸೆ ಫಲಕಾರಿಯಾಗದೇ ಅಂಬಿಕರವರು ಮೃತಪಟ್ಟಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ಅಪಘಾತಕ್ಕೆ ಕಾರಿನ ಚಾಲಕನೇ ಕಾರಣ. ಈಗ ನನಗೆ ನಿಪಿ-3 ಮತ್ತು 4 ನ್ನು ತೋರಿಸಿದ್ದು, ಸದರಿ ಫೋಟೋದಲ್ಲಿ ಇರುವ ಕಾರಿನಿಂದಲೇ ಅಪಘಾತ ಸಂಭವಿಸಿರುತ್ತದೆ. ನಾನು ಕಾರಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿರುವುದಿಲ್ಲ ಮತ್ತು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವಲ್ಲಿ ಯಾವುದೇ ತಕರಾರನ್ನು ವ್ಯಕ್ತಪಡಿಸಿರುವುದಿಲ್ಲ.

**ಪಾಟೀ ಸವಾಲು ಃ- ಆರೋಪಿ** ಪರ **ಶ್ರೀ. ವಿ. ಕೆ** ಪರವಾಗಿ **ಶ್ರೀ ಜಿ.ಎನ್. ಎಸ್** ವಕೀಲರಿಂದ ಃ-

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ . ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ ಕಾರಣ ಮತ್ತು ನ್ಯಾಯಾಲಯವು ಅವಕಾಶ ನೀಡಿದ ಕಾರಣ ಮತ್ತೆ ಸಮಯ ನೀಡಲು ತಿರಸ್ಕರಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 854/2018**
**ಚಾಸಾ :- 03 / ಪ್ರಾಸಾ :- 03**

| | |
|---|---|
| ಹೆಸರು | **ಪುನೀತ್ ಕುಮಾರ್** |
| ತಂದೆಯ ಹೆಸರು | **ಮುನಿರಾಜು** |
| ವಯಸ್ಸು | **34** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಹಾಗಲಹಳ್ಳಿ** |

**ದಿನಾಂಕಃ 15-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿ.24-06-2018 ರಂದು ನನ್ನ ಚಿಕ್ಕಪ್ಪನಾದ ಪ್ರಾಸಾ-2 ರವರು ಮತ್ತು ನನ್ನ ಚಿಕ್ಕಮ್ಮಳಾದ ಮೃತ ಅಂಬಿಕರವರು ನನ್ನ ಮಾವನ ಶವ ಸಂಸ್ಕಾರಕ್ಕೆ ಬಂದಿರುತ್ತಾರೆ. ಸಂಜೆ 5.30 ರ ಸಮಯದಲ್ಲಿ ಶವ ಸಂಸ್ಕಾರವನ್ನು ಮುಗಿಸಿಕೊಂಡು ಪ್ರಾಸಾ-2 ಮತ್ತು ಮೃತ ಅಂಬಿಕರವರು ಮೋಟಾರ್ ಬೈಕ್ ಸಂ.ಕೆಎ-50-ಹೆಚ್-3332 ರಲ್ಲಿ ವಾಪಸ್ಸು ಮಂಚನಬೆಲೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ನಾನು ಮತ್ತು ಪ್ರಾಸಾ-1 ರವರು ಅವರನ್ನು ಚಂದ್ರಪ್ಪ ಸರ್ಕಲ್ ಗೆ ಬಿಡಲು ನಮ್ಮ ದ್ವಿಚಕ್ರವಾಹನದಲ್ಲಿ ಹಿಂದೆ ಹೋಗುತ್ತಿದ್ದೆನು. ಆ ಸಮಯದಲ್ಲಿ ಎದುರುಗಡ ಚಿಕ್ಕನಹಳ್ಳಿ ಕಡೆಯಿಂದ ಮಂಚನಬೆಲೆ ಕಡೆಗೆ ಬರುತ್ತಿದ್ದ ಕಾರ ನಂ. ಕೆಎ-09-ಪಿ-8092 ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ಪ್ರಾಸಾ-2 ರವರ ಬೈಕ್ ಗೆ ಅಪಘಾತ ಮಾಡಿರುತ್ತಾರೆ. ಸದರಿ ಅಪಘಾತದಿಂದ ಪ್ರಾಸಾ2 ಮತ್ತು ಅಂಬಿಕಾರವರು ರಸ್ತೆಗೆ ಬಿದ್ದಿರುತ್ತಾವೆ. ಪ್ರಾಸಾ-2 ರವರ ತಲೆಗೆ, ಮುಖಕ್ಕೆ, ಕೈ ಕಾಲುಗಳಿಗೆ ಗಾಯವಾಗಿ ರಕ್ತಸ್ರಾವ ಆಗಿರುತ್ತದೆ. ಮೃತ ಅಂಬಿಕಾಳ ತಲೆಗೆ ತೀವ್ರವಾಗಿ

ಪೆಟ್ಟಾಗಿ ರಕ್ತಸ್ರಾವ ವಾಗಿರುತ್ತದೆ. ಪ್ರಾಸಾ-2 ಮತ್ತು ಮೃತ ಅಂಬಿಕಾರನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ವಾಹನವನ್ನು ಮಾಡಿ ಕಳುಹಿಸಿಕೊಟ್ಟಿದ್ದೇವೆ. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಜಯನಗರದ ಅಪೋಲೋ ಆಸ್ಪತ್ರೆಗೆ ಸೇರಿಸಲಾಗಿತ್ತು. ದಿ.07-07-2018 ರಂದು ಚಿಕಿತ್ಸೆ ಫಲಕಾರಿಯಾಗದೇ ಅಂಬಿಕರವರು ಮೃತಪಟ್ಟಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ಅಪಘಾತಕ್ಕೆ ಕಾರಿನ ಚಾಲಕನೇ ಕಾರಣ. ಈಗ ನನಗೆ ನಿಪಿ-3 ಮತ್ತು 4 ನ್ನು ತೋರಿಸಿದ್ದು, ಸದರಿ ಫೋಟೋದಲ್ಲಿ ಇರುವ ಕಾರಿನಿಂದಲೇ ಅಪಘಾತ ಸಂಭವಿಸಿರುತ್ತದೆ. ನಾನು ಕಾರಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿರುವುದಿಲ್ಲ ಮತ್ತು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವಲ್ಲಿ ಯಾವುದೇ ತಕರಾರನ್ನು ವ್ಯಕ್ತಪಡಿಸಿರುವುದಿಲ್ಲ.

ಸಾಕ್ಷಿಯ ಮುಖ್ಯ ವಿಚಾರಣೆ ಮುಗಿದ ನಂತರ ಸಾಕ್ಷಿಯ ಕೈಯಲ್ಲಿ ವಾಹನದ ಸಂಖ್ಯೆಗಳನ್ನು ಬರೆದುಕೊಂಡಿರುವುದು ಕಂಡುಬಂದಿರುತ್ತದೆ. ಆದರೆ ಸಾಕ್ಷಿಯು ಮುಖ್ಯ ವಿಚಾರಣೆಯ ಸಮಯದಲ್ಲಿ ಅವರ ಕೈಗಳನ್ನು ನೋಡಿರುವುದಿಲ್ಲ ಎಂದು ನ್ಯಾಯಾಲಯವು ಗಮನಿಸಿರುತ್ತದೆ.

**ಪಾಟೀ ಸವಾಲು ಃ- ಆರೋಪಿ** ಪರ **ಶ್ರೀ. ವಿ. ಕೆ ಪರವಾಗಿ ಶ್ರೀ ಜಿ.ಎನ್. ಎಸ್** ವಕೀಲರಿಂದ ಃ-

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ . ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ ಕಾರಣ ಮತ್ತು ನ್ಯಾಯಾಲಯವು ಅವಕಾಶ ನೀಡಿದ ಕಾರಣ ಮತ್ತೆ ಸಮಯ ನೀಡಲು ತಿರಸ್ಕರಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 854/2018**
**ಚಾಸಾ :- 04 / ಪ್ರಾಸಾ :- 04**

| | |
|---|---|
| ಹೆಸರು | **ಸಂಜಯ್** |
| ತಂದೆಯ ಹೆಸರು | **ಮುನಿರಾಜು** |
| ವಯಸ್ಸು | **32** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಹಾಗಲಹಳ್ಳಿ** |

**ದಿನಾಂಕಃ 15-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಈಗ ನನಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ದಿ.25-06-2018 ರಂದು ಬೆಳಗ್ಗೆ 9 ರಿಂದ 10 ಗಂಟೆ ಸಮಯದಲ್ಲಿ ಅಪಘಾತದ ನಡೆದ ಸ್ಥಳದಲ್ಲಿ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಅಪಘಾತವು ಕಾರ್ ಮತ್ತು ದ್ವಿಚಕ್ರವಾಹನಕ್ಕೆ ಅಪಘಾತವಾಗಿರುತ್ತದೆ, ಈ ವಿಷಯಕ್ಕೆ ಸಂಬಂಧಿಸಿದಂರೆ ಪೋಲೀಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಕಾರ ನಂ. ಕೆಎ-09-ಪಿ-8092 ಆಗಿರುತ್ತದೆ. ದ್ವಿ ಚಕ್ರ ವಾಹನದ ಸಂ. ಕೆಎ-50-ಹೆಚ್ -3332 ಆಗಿದೆ. ನನ್ನ ಜೊತೆ ನಿಪಿ-2 ಕ್ಕೆ ಪ್ರಾಸಾ-1 ಮತ್ತು ಚಾಸಾ-5 ರವರು ಸಹಿ ಮಾಡಿರುತ್ತಾರೆ.

**ಪಾಟೀ ಸವಾಲು :- ಆರೋಪಿ ಪರ ಶ್ರೀ. ವಿ. ಕೆ ಪರವಾಗಿ ಶ್ರೀ ಜಿ.ಎನ್. ಎಸ್** ವಕೀಲರಿಂದ :-

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ . ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ ಕಾರಣ ಮತ್ತು ನ್ಯಾಯಾಲಯವು ಅವಕಾಶ ನೀಡಿದ ಕಾರಣ ಮತ್ತೆ ಸಮಯ ನೀಡಲು ತಿರಸ್ಕರಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 854/2018**

**ಚಾಸಾ :- 05 / ಪ್ರಾಸಾ :- 05**

| | |
|---|---|
| ಹೆಸರು | **ಆರ್ ಪ್ರಕಾಶ್** |
| ತಂದೆಯ ಹೆಸರು | **ಲೇಟ್ ರಾಜಯ್ಯ** |
| ವಯಸ್ಸು | **54** |
| ಉದ್ಯೋಗ | **ಸಮಾಜ ಸೇವಕ** |
| ವಿಳಾಸ | **ಹಲಸೂರು** |

**ದಿನಾಂಕಃ 15-06-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಈಗ ನನಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ದಿ.25-06-2018 ರಂದು ಬೆಳಗ್ಗೆ 9 ರಿಂದ 10 ಗಂಟೆ ಸಮಯದಲ್ಲಿ ಅಪಘಾತದ ನಡೆದ ಸ್ಥಳದಲ್ಲಿ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನನ್ನ ಜೊತೆ ನಿಪಿ-2 ಕ್ಕೆ ಪ್ರಾಸಾ-1 ಮತ್ತು 4 ರವರು ಸಹಿ ಮಾಡಿರುತ್ತಾರೆ. ಕಾರ್ ಮತ್ತು ದ್ವಿಚಕ್ರವಾಹನದ ನಡುವೆ ಅಪಘಾತವಾದ ಕಾರಣ ನಿಪಿ-2 ರಂತೆ ಪಂಚನಾಮೆಯನ್ನು ಮಾಡಲಾಗಿರುತ್ತದೆ. ಸದರಿ ಕಾರ ನಂ. ಕೆಎ-09-ಪಿ-8092 ಆಗಿರುತ್ತದೆ. ದ್ವಿ ಚಕ್ರ ವಾಹನದ ಸಂ. ಕೆಎ-50-ಹೆಚ್-3332 ಆಗಿದೆ.

**ಪಾಟೀ ಸವಾಲು :- ಆರೋಪಿ ಪರ ಶ್ರೀ. ವಿ. ಕೆ ಪರವಾಗಿ ಶ್ರೀ ಜಿ.ಎನ್. ಎಸ್** ವಕೀಲರಿಂದ :-

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ . ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ ಕಾರಣ ಮತ್ತು ನ್ಯಾಯಾಲಯವು ಅವಕಾಶ ನೀಡಿದ ಕಾರಣ ಮತ್ತೆ ಸಮಯ ನೀಡಲು ತಿರಸ್ಕರಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**